ಚೆಂಬಣ್ಣ ಶೆಟ್ರು ತಾಕೀತು ಮಾಡಿದ್ರು. ಇತ್ತ ಶಾರವ್ವ ಮುಂಜ ಮುಂಜಾನೆ ಗಂಡ ನಾಗಪ್ಪ ಜೊತೆಗೆ ಹೊಲಕ್ಕ ಕಳೆ ತೆಗ್ಯಾಕ ಹೋಗಿದ್ಲು. ಊರಾನ ಚಲವಾದಿ ಮುಮ್ಮಿಗಟ್ಟಿಗೆ ಬಂದು ಸಾವಂತ್ರಿ ಸತ್ತಿದ್ದ ಸುದ್ದಿ ಹೇಳಿದಾಗ ಶಾರವ್ವ ಹೊಲದಾಗ ಇದ್ಲು. ಮನ್ಯಾನ ಆಳಮಗ ಬಂದು ಅವರ ಅವ್ವನ ಸಾವಿನ ಸುದ್ದಿ ಹೇಳಿದ ಕೂಡಲೇ, ಅಲ್ಲೇ ಎದಿಎದಿ ಬಡಕೊಂಡು ಎಚ್ಚರ ತಪ್ಪಿ ಬಿದ್ಲು. ನಾಗಪ್ಪ ತನ್ನ ಹೆಂಡತಿ ಶಾರವ್ವಗ ನೀರು ಚಿಮಕಿಸಿ ಎಬ್ಬಿಸಿ, 'ನಡಿ ಲಗೂನ, ಸತ್ತ ನಿಮ್ಮವ್ವನ ಮಾರಿನರ ನೋಡತಿ ಇಲ್ಲೋ' ಅಂತಾ ಕರಕೊಂಡು ಬಂದಾ. ಶೆಟ್ಟರ ಮನಿಮುಂದ ಜನರ ಜಾತ್ರಿನ ಸೇರಿತ್ತು. ಶಾರವ್ವ ತವರುಮನಿ ಇನ್ನು ಒಂದು ಫರ್ಲಾಂಗ ಇರುವಾಗಲೇ ಬಾಯಿ ಬಾಯಿ ಬಡಕೋತ, ಜೋರಬಾಯಿ ಮಾಡಿ ಅಳಕೋತ ಬಂದು, ಅವ್ವನ ಹೆಣದ ಮುಂದ ಕುಂತ ಎದಿ ಎದಿ ಬಡಕೊಂಡು ಅಳಾಕತ್ತಿದ್ಲು. ಅವ್ವನ ಅಕಾಲಿಕ ಸಾವಿನಿಂದ ಶಾರವ್ವಗ ದಂಗ ಬಡದಂಗಾಗಿತ್ತು.

ಮಧ್ಯಾಹ್ನ ಹನ್ನೆರಡಕ್ಕೆ ಸರಿಯಾಗಿ ನೇಸರಗಿಯ ಮಗ್ಗಲದಾಗಿನ ಊರು ಚಿಕ್ಕನರ್ತಿಯ ದೈವ ಶೆಟ್ಟರ ಮನೆಮುಂದ ಜಮಾಯಿಸ್ತು. ಚಿಕ್ಕನರ್ತಿ ಗೌಡ ಬಸಲಿಂಗಪ್ಪ ದೊಡ್ಡದಾದ ಮಾಲಿ ತೊಗೊಂಡು ನೂರಾರು ಜನ ಹಿರಿಕಿರಿಯರನ್ನು ಕರಕೊಂಡು ಹಲಗಿ ಬಾರಿಸುವ ದ್ಯಾಮ್ಯಾನ ಮುಂದ ಹಾಕ್ಕೊಂಡು ಬಹಳ ನೋವಿನಿಂದ ಶೆಟ್ಟರ ಅಂಗಳಕ ಬಂದಾ. ಚಂಬಣ್ಣ ಶೆಟ್ಟರು ಬಸಲಿಂಗಪ್ಪನ ಮುಖಾನೋಡಿ ಬಹಳ ನೋವಿನಿಂದ ಅಳಾಕತ್ತಿದರು. ಗೌಡರು ಮಾತ್ರ ತಮ್ಮ ಒಡಹುಟ್ಟಿದ ಅಕ್ಕನಂಗಿದ್ದ ಸಾವಂತ್ರಕ್ಕನ ಸಾವಿನ ಸುದ್ದಿ ತಿಳಿದು ಬಹಳ ಕಸಿವಿಸಿಗೊಂಡಿದ್ರು. ಶೆಟ್ಟರು ಗೌಡರು ಆಪ್ತಗೆಳೆಯರು ಹಿಂಗಾಗಿ ಚೆಂಬಣ್ಣನ ಹೆಂಡತಿ ಸಾವಂತ್ರಿ ಹಿರಿತನದ ಗುಣ, ಆಕಿ ಧರ್ಮ ಸಹಜವಾಗಿ ಎಲ್ಲಾರ ಮನಸ್ಸು ಗೆದ್ದಿತ್ತು.

ಇಷ್ಟೆಲ್ಲಾ ನಡೆದಿದ್ರೂ ಈವರೆಗೂ ಸತ್ತ ಮನಿ ಕಡೆಗೆ ಸುಳಿಯದೆ ಇರುವ ಊರಿನ ಗೌಡಶಾನಿ ಗೌರಮ್ಮನ ಬಗೆಗೆ ಗುಸುಗುಸು ಮಾತು ನಡೆದಿದ್ವು. ಯಾಕ ಗೌರಮ್ಮ ಇನ್ನೂ ಬಂದಿಲ್ಲಾ ಅಂತಾ ಎಲ್ಲರ ಗಮನ ಆ ಕಡೆಗೆ ಇತ್ತು. ದಡಿ ಸೀರಿ ಉಟಕೊಂಡು, ಹಣೆತುಂಬ ದೊಡ್ಡ ಕುಂಕುಮಾ ಇಟಕೊಂಡು, ತಲೆಗೂದಲು ಏರಿಸಿ ತುರುಬ ಕಟಕೊಂಡು, ಕೈ ತುಂಬ ಬಳಿ, ಕೊರಳತುಂಬ ಸರಾ ಹಾಕ್ಕೊಂಡು ಗೌರಮ್ಮ ಎಲ್ಲರ ನಿರೀಕ್ಷೆಯಂಗ ಶೆಟ್ರ ಅಂಗಳಕ ಬಂದಳು. ನೆರೆದ ಎಲ್ಲಾ ದೈವದ ಲಕ್ಷ್ಯ ಗೌರಮ್ಮನ ಕಡೆಗೆ ನೆಟ್ಟಿತು. ಗೌರಮ್ಮ ಅಂದ್ರ ಊರಿನ ಧರ್ಮಿಷ್ಠೆ. ನ್ಯಾಯ, ನೀತಿ, ಸತ್ಯ ಇವುಗಳನ್ನು ಉಸಿರಾಗಿ ಪಾಲಿಸ್ತಾ ಬಂದ ಗೌಡಶಾನಿ. ಆಕಿ ಬರದೇ ಹೋದರ ಊರಾಗ ಸತ್ತ ಹೆಣದ ಕಿಮ್ಮತ್ತು ಕಡಿಮಿ ಅಂತ ಸುತ್ತ ಏಳು ಹಳ್ಳಿ ಜನಾ ತಿಳಿತಿದ್ರು. ಗೌರಮ್ಮ ಗೌಡಶಾನಿ ಬಹಳ ಹೃದಯವಂತಳು. ಊರಾನ ಎಲ್ಲಾ ಧರ್ಮದ, ಎಲ್ಲಾ ಜಾತಿ ಜನ ಆಕಿನ್ನ ಧರ್ಮದೇವತೆ ಅಂತಾನೇ ಕರಿತಿದ್ರು. ಗೌರಮ್ಮ ಯಾವಾಗಲೂ ಹೆಣದ ಮುಂದೆ ನಿಂತು ತನ್ನ ಸೀರಿ ಸೆರಗಿನ್ಯಾಗ ಕಟ್ಟಿದ್ದ ಗಂಟು ಬಿಚ್ಚಿ ದೈವದಮುಂದೆ ಸುರಿದಾಗ ಮಾತ್ರ ಗೂಟಕ್ಕ ಕುಂತ ಹೆಣಕ್ಕೂ ನೆಮ್ಮದಿ ಸಿಗತಿತ್ತು. ಗೌರಮ್ಮನ ದೈವಪರತೆ, ಧರ್ಮನಿಷ್ಠೆಗಳ ಬಗ್ಗೆ ಕೂಡಿದ ಜನಾ ಆನಂದ ಪಡತಿದ್ದರು.

ಗೌರಮ್ಮ ಗೌಡಶಾನಿ ಹೆಸರಿಗೆ ತಕ್ಕಂಗ ಸಾಕ್ಷಾತ್ ಪಾರ್ವತಿ ಅವತಾರ ಅಂತಾನೇ ಹತ್ತು ಹಳ್ಳಿಗೆ ಹೆಸರುವಾಸಿಯಾದವಳು. ಗಂಡ ಬಸಲಿಂಗಪ್ಪ ಬಹಳ ಸಿಡುಕಿನ ಸ್ವಭಾವದವನಾದ್ದರಿಂದ ಸಣ್ಣ ವಯಸ್ಸಿನ್ಯಾಗ ಬಾಳೆಕ ಬಂದ ಗೌರಮ್ಮ ಬಹಳ ಸಮಾಧಾನಿಯಾಗಿದ್ಲು. ಗೌರಮ್ಮನ ಅಪ್ಪ ಪೌಜುದಾರ ಇದ್ದಾ. ಹತ್ತ ಹಳ್ಳಿ ಒಗತನವಿದ್ದ ಮನೆತನದಿಂದ ಬಂದ ಗೌರಮ್ಮಗ ಆರು ಜನ ಅಣ್ಣಂದಿರು, ಗೌರವ್ವ ಸಣ್ಣ ತಂಗಿಯಾಗಿದ್ರೂ ತಾಯಿಸತ್ತ ಮಕ್ಕಳಾದ ಅಣ್ಣಂದಿರಿಗೆ ಆಕಿ ಅವ್ವನ ಪ್ರೀತಿ ತೋರಿಸ್ತಿದ್ಲು. ಸಣ್ಣಕ್ಕಿರುವಾಗಲೇ ತಾಯಿ ಕಳಕೊಂಡ ಗೌರಮ್ಮ ತಾನ ಎಲ್ಲಾರಿಗೂ ತಾಯಿ ಆಗಿದ್ಲು. ಗೌರಮ್ಮನ ಮದುವೆ ಮಾಡಿ ಗಂಡನ ಮನಿಗೆ ಕಳಿಸಿದ ಅಡಿವೆಪ್ಪ ಸಾಹುಕಾರ ಒಂದು ವಾರ ಊಟಾ ಮಾಡಿರಲಿಲ್ಲ. ಹಿಂಗ ಗೌರಮ್ಮ ಗೌಡಶಾನಿ ಗಂಡನಮನಿ ತವರುಮನಿಯವರಿಗೆ ಹಾಗೂ ಊರಿನವರಿಗೆ ತಾಯಿನೇ ಆಗಿದ್ಲು.

ಸಾವಂತ್ರಿ ಮತ್ತು ಗೌರವ್ವ ಓರಿಗೆಯವರಲ್ಲದಿದ್ದರೂ, ಅಷ್ಟೇ ಐದಾರು ತಿಂಗಳ ಅಂತರದಲ್ಲಿ ಹೊಸಮಾಲಗಿತ್ಯಾರ ಆಗಿ ಬಾಳೇಕ ಬಂದವರು. ಹಿಂಗಾಗಿ, ಬಹಳ ಆಪ್ತ ಗೆಳೆತನ ಇತ್ತು